QP CODE: 31201

ದ್ವಿತೀಯ ಸೆಮಿಸ್ಟರ್ ಬಿ.ಎಸ್ಸಿ. ಪದವಿ ಪರೀಕ್ಷೆ, ಮೇ / ಜೂನ್, 2026
(ಎನ್‌ಇಪಿ ಸ್ಕೀಂ)
ಕನ್ನಡ ಭಾಷಾ ಪತ್ರಿಕೆ - 2
(NSB 0010) ಸಮನ್ವಯ - 2

ಅವಧಿ : 2 ಗಂಟೆಗಳು ಗರಿಷ್ಠ ಅಂಕಗಳು : 60

ವಿದ್ಯಾರ್ಥಿಗಳಿಗೆ ಸೂಚನೆಗಳು:

1. ವಿದ್ಯಾರ್ಥಿಯು ವಿಭಾಗ ಸಂಖ್ಯೆ ಹಾಗೂ ಪ್ರಶ್ನೆ ಸಂಖ್ಯೆಗಳನ್ನು ಸ್ಪಷ್ಟವಾಗಿ ಮಾರ್ಜಿನ್ ಗೆರೆಯ ಒಳಗೆ ಬರೆಯಬೇಕು.
2. ವಿಭಾಗ ಸಂಖ್ಯೆ ಹಾಗೂ ಪ್ರಶ್ನೆ ಸಂಖ್ಯೆಗಳನ್ನು ನಮೂದಿಸದೇ ಇರುವ ಉತ್ತರಗಳನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ.
3. ವಿಭಾಗ - I ರಲ್ಲಿನ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರವನ್ನು ಉತ್ತರ ಪತ್ರಿಕೆಯ ಮೊದಲ ಪುಟದಲ್ಲಿ ಬರೆಯಬೇಕು ಹಾಗೂ ಅದೇ ಪ್ರಶ್ನೆಗಳಿಗೆ ಉತ್ತರವನ್ನು ಪುನರಾವರ್ತಿಸಬಾರದು.
4. ಪ್ರಶ್ನೆ ಪತ್ರಿಕೆಯಲ್ಲಿನ ವಿಭಾಗ - I ರಲ್ಲಿನ ಬಹು ಆಯ್ಕೆಯ ಪ್ರಶ್ನೆಗಳಿಗೆ ನೀಡಲಾದ ಆಯ್ಕೆ ಉತ್ತರಗಳ (Options) ಮೇಲೆ ಯಾವುದೇ ರೀತಿಯ ಗುರುತು ಸೂಚಕ ಚಿಹ್ನೆಗಳಾದ ವೃತ್ತ ಹಾಕುವುದು, ಚುಕ್ಕೆ ಇಡುವುದು, ಸರಿ ಗುರುತು ಮಾಡುವುದು (✓) ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಲಾಗಿದೆ. ಪ್ರಶ್ನೆ ಪತ್ರಿಕೆಯ ಮೇಲೆ (ನೋಂದಣಿ ಸಂಖ್ಯೆಯನ್ನು ಹೊರತುಪಡಿಸಿ) ಬೇರೆ ಯಾವುದೇ ತರಹದ ಬರವಣಿಗೆಗಳನ್ನು ಮಾಡಬಾರದು.

ವಿಭಾಗ - I

I. ಸರಿಯಾದ ಉತ್ತರವನ್ನು ಆಯ್ದು ಬರೆಯಿರಿ. **(10x1=10)**

I-1. ಪೂರ್ಣಚಂದ್ರ ತೇಜಸ್ವಿಯವರ 'ಕರ್ವಾಲೊ' ಕೃತಿ ಯಾವ ಪ್ರಕಾರದ್ದು?
(ಅ) ಕಥಾಸಂಕಲನ (ಆ) ಪ್ರಬಂಧ (ಇ) ನಾಟಕ (ಈ) ಕಾದಂಬರಿ

I-2. ಮಂಗಳಮುಖಿ ಕವಯಿತ್ರಿ ಚಾಂದಿನಿಯವರ ಜನ್ಮಸ್ಥಳ .....
(ಅ) ನವಿಲೆ (ಆ) ಹಳೆ ಸೋಸಲೆ (ಇ) ಸೋಸಲೆ (ಈ) ಹೊಸ ಸೋಸಲೆ

I-3. 'ಕ್ರೌಂಚ ಪಕ್ಷಿಗಳು' ಎಂಬ ಕಥಾ ಸಂಕಲನದ ಕರ್ತೃ ಯಾರು?
(ಅ) ಎಂ.ಕೆ. ಇಂದಿರಾ (ಆ) ಎಚ್.ಎನ್. ಅನುಪಮ
(ಇ) ವೈದೇಹಿ (ಈ) ಗೀತಾ ನಾಗಭೂಷಣ

I-4. ಕನ್ನಡದ ಭಗವದ್ಗೀತೆ ಎಂಬ ಹೆಸರು ಪಡೆದ ಕೃತಿ
(ಅ) ಮರುಳ ಮುನಿಯನ ಕಗ್ಗ (ಆ) ಉಮರನ ಒಸಗೆ
(ಇ) ಶ್ರೀ ರಾಮ ಪರೀಕ್ಷಣ (ಈ) ಮಂಕುತಿಮ್ಮನ ಕಗ್ಗ

I-5. 'ಸುನೀತಗಳ ಸಾಮ್ರಾಟ' ಎಂದು ಯಾರನ್ನು ಕರೆಯುತ್ತಾರೆ?
(ಅ) ಕನಕದಾಸರು (ಆ) ಪುರಂದರದಾಸರು
(ಇ) ಚನ್ನವೀರ ಕಣವಿ (ಈ) ಚಂದ್ರಶೇಖರ ಕಂಬಾರ

I-6. ಎ.ಎನ್. ಮೂರ್ತಿರಾಯ ಆತ್ಮಕಥನದ ಹೆಸರು .....
(ಅ) ಸಂಜೆಗಣ್ಣಿನ ಹಿನ್ನೋಟ (ಆ) ದೇವರು
(ಇ) ಹುಳಿ ಮಾವಿನ ಮರ (ಈ) ಚಿತ್ರಗಳು - ಪತ್ರಗಳು

I-7. ಪಿ. ಸಾಯಿನಾಥರು ಎಂ.ಎ. ಪದವಿ ಪಡೆದ ವಿಷಯ ಯಾವುದು?
(ಅ) ಕನ್ನಡ (ಆ) ಇಂಗ್ಲೀಷ್ (ಇ) ಇತಿಹಾಸ (ಈ) ತತ್ವಶಾಸ್ತ್ರ

ಗ್ರಂಥಾಲಯ

I-8. ಕುವೆಂಪುರವರಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದ ಕೃತಿ .....

(ಅ) ನೆನಪಿನ ದೋಣಿಯಲ್ಲಿ (ಆ) ಕಾನೂರು ಸುಬ್ಬಮ್ಮ ಹೆಗ್ಗಡತಿ

(ಇ) ಮಲೆಗಳಲ್ಲಿ ಮದುಮಗಳು (ಈ) ಶ್ರೀರಾಮಾಯಣ ದರ್ಶನಂ

I-9. ಇದು ಡಿ.ಬಿ. ರಜಿಯಾ ಕವಯಿತ್ರಿಯ ಕವನದ ಶೀರ್ಷಿಕೆ

(ಅ) ಕೋಗಿಲೆ (ಆ) ಗಂಗಾವತರಣ (ಇ) ಇಬ್ಬನಿ (ಈ) ಪರದೆ ಸರಿದಂತೆ

I-10. ಕುವೆಂಪು ಹೊಸದಾದ ಕಾರಿನ ಮೇಲೆ ಬರೆದ ಕವಿತೆ

(ಅ) ಕಾರು ಬಾರು (ಆ) ಚಕ್ರಚರಣಗೆ ಸ್ವಾಗತ

(ಇ) ನಮ್ಮ ಕಾರಿಗೆ ಸ್ವಾಗತ (ಈ) ನಮ್ಮ ಕಾರು

ವಿಭಾಗ - II

II. ಐದು ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(5x3=15)**

II-1. ಸ್ಕೂಟರ್ ರಿಪೇರಿ ಆಧುನಿಕ ಬದುಕಿನ ಒತ್ತಡದ ಪ್ರತಿಬಿಂಬ.

II-2. ಧರ್ಮಾಂಧತೆಯ ವಿಷಯಗಳು 'ಮಾನವೀಯತೆ ಒಂದು ಅನಿಸಿಕೆ' ಲೇಖನದಲ್ಲಿ ಮೂಡಿ ಬಂದ ಬಗೆ

II-3. ಧಾರವಾಡದ ಮಳೆಗಾಲದ ಚಿತ್ರಣ

II-4. ಚನ್ನವೀರ ಕಣವಿ

II-5. ಜಾಗತೀಕರಣ

II-6. ಸೀಸನಾಟು

II-7. ಕಂಪ್ಯೂಟರ್ ಕನ್ನಡ

II-8. ಗಾಡಿಯ ಪಯಣದ ಸುಖಾನುಭವ

ವಿಭಾಗ - III

III. ಕೆಳಗಿನ ಮೂರು ಪ್ರಶ್ನೆಗಳಿಗೆ ನಿಖರವಾದ ಉತ್ತರ ಬರೆಯಿರಿ. **(3x5=15)**

III-1. ಜನರ ಜೀವನದ ಮೇಲೆ ಪ್ರಭಾವ ಬೀರುವ ಸಣ್ಣ ಸಾಲವನ್ನು ಕುರಿತು ವಿವರಿಸಿ.

III-2. 'ಛಾವಣಿ ನೀರು ಸಂಗ್ರಹ'ದ ಮಹತ್ವವನ್ನು ಕುರಿತು ಬರೆಯಿರಿ.

III-3. ಜಾಗತೀಕರಣದಿಂದಾದ ಅಸಮಾನತೆಯನ್ನು ಕುರಿತು ಚರ್ಚಿಸಿ.

III-4. ಜನಪದರು ಮಳೆಯನ್ನು ನೋಡಿದ ಬಗೆಯನ್ನು ವಿವರಿಸಿ.

III-5. ಮಾನವೀಯತೆ ಒಂದು ಅನಿಕೆ ಲೇಖನದ ಆಶಯವನ್ನು ಬರೆಯಿರಿ.

ವಿಭಾಗ - IV

IV. ಕೆಳಗಿನ ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ. **(2x10=20)**

IV-1. ಮಂಕುತಿಮ್ಮನ ಕಗ್ಗದಲ್ಲಿನ ಜೀವನ ಮೌಲ್ಯವನ್ನು ಕುರಿತು ಬರೆಯಿರಿ.

ಅಥವಾ

ಕಲ್ಕಿ ಕವನದ ಸ್ವಾರಸ್ಯವನ್ನು ಚರ್ಚಿಸಿ.

IV-2. ಗಾಡಿಯ ಪಯಣದ ಸ್ವಾರಸ್ಯವನ್ನು ಕುರಿತು ಬರೆಯಿರಿ.

ಅಥವಾ

ಡಾ। ಸಿ.ಆರ್. ಚಂದ್ರಶೇಖರರವರ 'ನೀವು ಕಾಣುವ ಕನಸುಗಳಿಗೆ ಅರ್ಥವಿದೆಯೆ?' ವಿಚಾರ ಮಾಡಿ.

* * *